# ವಿಡಿಯೊ ಕಾಲ್; ಸ್ಕ್ರೀನ್ ಶೇರ್ ಮಾಡಿ

■ ಶಶಿಕುಮಾರ್ ಸಿ.

ವಾಟ್ಸ್‌ಆ್ಯಪ್‌ನಲ್ಲಿ ವಿಡಿಯೊ ಕರೆ ಮಾಡುವಾಗ ಸ್ಕ್ರೀನ್ ಶೇರಿಂಗ್ ಮಾಡುವ ಅವಕಾಶವನ್ನು ಮೆಟಾ ಕಂಪನಿ ಕಲ್ಪಿಸಿದ್ದು, ಈ ಬಗ್ಗೆ ಕಂಪನಿಯ ಮಾರ್ಕ್ ಜುಕರ್‌ಬರ್ಗ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಸ್ಕ್ರೀನ್ ಶೇರಿಂಗ್ ಫೀಚರ್ ಬಳಸಿ ವಾಟ್ಸ್‌ಆ್ಯಪ್ ಅಪ್‌ಡೇಟ್ ಮಾಡಿಕೊಳ್ಳಬೇಕಿದೆ. ವಿಡಿಯೊ ಕರೆ ಮಾಡುವಾಗ ಬಳಕೆದಾರರು, 'ಶೇರಿಂಗ್' ಐಕಾನ್ ಕ್ಲಿಕ್ಕಿಸಿದರೆ ನಿರ್ದಿಷ್ಟ ಅಪ್ಲಿಕೇಷನ್ ಅಥವಾ ಸಂಪೂರ್ಣ ಮೊಬೈಲ್ ಸ್ಕ್ರೀನ್ ಅನ್ನೇ ಹಂಚಿಕೊಳ್ಳುವ ಅವಕಾಶವು ಈಗ ಲಭ್ಯ. ಕಚೇರಿ ಮೀಟಿಂಗ್ ಸೇರಿದಂತೆ ಇನ್ನಿತರ ಕಾರ್ಯಗಳಿಗೆ ಈ ಫೀಚರ್ ಅನುಕೂಲಕರವಾಗಿದೆ.

'ಕೆಲಸದ ನಿಮಿತ್ತ ಡಾಕ್ಯುಮೆಂಟ್‌ಗಳನ್ನು ಹಂಚಿಕೊಳ್ಳುವುದು, ಕುಟುಂಬದೊಂದಿಗೆ ಚಿತ್ರಗಳನ್ನು ಹಂಚಿಕೊಳ್ಳುವುದು, ರಜೆ ಕುರಿತು ಯೋಜಿಸುವುದು ಅಥವಾ ಸ್ನೇಹಿತರೊಂದಿಗೆ ಆನ್‌ಲೈನ್‌ನಲ್ಲಿ ಶಾಪಿಂಗ್ ಮಾಡುವುದು ಮುಂತಾದ ಸಂದರ್ಭದಲ್ಲಿ ವಿಡಿಯೊ ಕರೆ ಮಾಡಿ ನಿಮ್ಮ ಪರದೆಯನ್ನು ಇತರರೊಂದಿಗೆಯೂ ಲೈವ್ ವೀಕ್ಷಣೆಯನ್ನು ಹಂಚಿಕೊಳ್ಳಬಹುದು ಎಂದಿರುವ ಕಂಪನಿಯು ಬಳಕೆದಾರರು ಸ್ಮಾರ್ಟ್‌ಫೋನ್‌ಗಳಲ್ಲಿ ವಿಶಾಲವಾದ ಮತ್ತು ಮತ್ತಷ್ಟು ಉತ್ತಮ ಅನುಭವಕ್ಕಾಗಿ ಲ್ಯಾಂಡ್‌ಸ್ಕೇಪ್ ಮೋಡ್‌ನಲ್ಲಿ ವಿಡಿಯೊ ಕರೆಗಳನ್ನು ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದಿದೆ. ■






Landscape Mode on mobile

## ಜಿಮೇಲ್‌ನಲ್ಲೇ ಅನುವಾದ ಆಯ್ಕೆ

ಜಗತ್ತಿನ ಬಹುತೇಕರು ಹೆಚ್ಚಾಗಿ ಬಳಸುತ್ತಿರುವ ಗೂಗಲ್‌ನ ಜಿಮೇಲ್‌ನಲ್ಲಿ ಇನ್ಮುಂದೆ ಗೂಗಲ್ ಟ್ರಾನ್ಸ್‌ಲೇಟ್ ಆಯ್ಕೆಯು ಲಭ್ಯವಾಗಲಿದೆ. ಭಾಷಾಂತರಕ್ಕಾಗಿ ಟ್ರಾನ್ಸ್‌ಲೇಟ್ ವೆಬ್‌ಪುಟವನ್ನು ಪ್ರತ್ಯೇಕವಾಗಿ ತೆರೆದು ಅನುವಾದ ಮಾಡಿಕೊಂಡು ಓದಬೇಕಿತ್ತು. ಇನ್ಮುಂದೆ ಇದರ ಅವಶ್ಯಕತೆ ಇಲ್ಲ.

ಜಿಮೇಲ್‌ಗೆ ಬಂದ ಮೇಲ್‌ಗಳನ್ನು ತಮಗೆ ಬೇಕಾದ ಭಾಷೆಯಲ್ಲಿ ಅಲ್ಲಿಯೇ ಬದಲಿಸಿಕೊಂಡು ಓದಬಹುದಾಗಿದೆ. ಮೇಲ್ ಕಳಿಸುವಾಗಲೂ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದಿಸಿಕೊಂಡು ಮೇಲ್ ಮಾಡಬಹುದು. ಇದಕ್ಕಾಗಿ ಗೂಗಲ್ ಜಿಮೇಲ್ ಅನ್ನು ಅಪ್‌ಡೇಟ್ ಮಾಡಿಕೊಳ್ಳಬೇಕಿದೆ.

ಟ್ವಿಟರ್‌ನಲ್ಲಿ ಇದೇ ಮಾದರಿಯ ಅನುವಾದದ ಆಯ್ಕೆಯು ಲಭ್ಯವಿದ್ದು, ಬೇರೆ ಭಾಷೆಗಳಲ್ಲಿರುವ ಟ್ವೀಟ್ ಅನ್ನು ತಮಗೆ ಬೇಕಾದ ಭಾಷೆಯಲ್ಲಿ ಟ್ವಿಟರ್ ವೇದಿಕೆಯಲ್ಲೇ ಅನುವಾದಿಸಿಕೊಂಡು ಓದಬಹುದು. 'ಜಿಮೇಲ್‌ನಲ್ಲೂ ಇಂತಹ ಆಯ್ಕೆ ಕಲ್ಪಿಸುವಂತೆ ಗೂಗಲ್‌ಗೆ ಸಾಕಷ್ಟು ಬಳಕೆದಾರರು ಬೇಡಿಕೆ ಸಲ್ಲಿಸಿದ್ದರು. ಅದನ್ನು ಈಗ ಈಡೇರಿಸಿದ್ದೇವೆ' ಎಂದಿದೆ ಕಂಪನಿ.

ಮೇಲ್ ಕಳಿಸುವಾಗ ಮತ್ತು ಓದುವಾಗ ಕೇವಲ ಟ್ರಾನ್ಸ್‌ಲೇಟ್ ಆಯ್ಕೆ ಮಾಡಿದರೆ ಸಾಕು. ಲಭ್ಯವಿರುವ ಎಲ್ಲ ಭಾಷೆಗಳಲ್ಲಿ ಓದಬಹುದು ಮತ್ತು ಬದಲಾಯಿಸಬಹುದು. ಅಲ್ಲದೇ ಈ ಫೀಚರ್ ಬಳಸುವಾಗ ಬಳಕೆದಾರರು ತಮಗೆ ಬೇಕಾದ ಭಾಷೆಗಳಲ್ಲಿ ಸೇವೆ ಲಭಿಸುವಂತೆ ಆಯ್ಕೆ ಮಾಡಿಕೊಳ್ಳಬಹುದು. ಅಂದರೆ ಮ್ಯಾನ್ಯುವಲ್ ಆಗಿ ಟ್ರಾನ್ಸ್‌ಲೇಟ್ ಆಯ್ಕೆಯನ್ನು ಬದಲಾಯಿಸಿಕೊಳ್ಳಬಹುದು. ■

## ಮೊಬೈಲ್‌ಗೆ ಬಂತು ಚಾಟ್‌ಜಿಪಿಟಿ

ಡೆಸ್ಕ್‌ಟಾಪ್ ಆವೃತ್ತಿಯಲ್ಲಷ್ಟೇ ಲಭ್ಯವಿದ್ದ ಚಾಟ್‌ಜಿಪಿಟಿ, ಇನ್ನು ಮುಂದೆ ಸ್ಮಾರ್ಟ್‌ಫೋನ್‌ಗಳಲ್ಲೂ ಪಡೆಯಬಹುದಾಗಿದೆ. ಸದ್ಯದ ಮಟ್ಟಿಗೆ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಲಭ್ಯವಿರುವ ಚಾಟ್‌ಜಿಪಿಟಿಯು ಇನ್ನೆರಡು ತಿಂಗಳಲ್ಲಿ ಐಫೋನ್‌ಗಳಲ್ಲೂ ಲಭ್ಯವಾಗಲಿದೆ. ಅಮೆರಿಕ, ಭಾರತ, ಬಾಂಗ್ಲಾದೇಶ ಮತ್ತು ಬ್ರೆಜಿಲ್‌ನಲ್ಲಿ ಮಾತ್ರ ಸ್ಮಾರ್ಟ್‌ಫೋನ್‌ಗಳಲ್ಲಿ ಚಾಟ್‌ಜಿಪಿಟಿ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ.

ಆ್ಯಂಡ್ರಾಯ್ಡ್ 6.0 ಮತ್ತು ಅದಕ್ಕಿಂತ ಮೇಲ್ಪಟ್ಟ ಆವೃತ್ತಿಗಳಲ್ಲಷ್ಟೇ ಕಾರ್ಯನಿರ್ವಹಿಸುವ ಚಾಟ್‌ಜಿಪಿಟಿಯು ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿದೆ. ಚಾಟ್‌ಜಿಪಿಟಿ ನಿರ್ಮಾತೃ ಸಂಸ್ಥೆಯಾದ ಓಪನ್‌ಐಎ ಈ ಕುರಿತು ಹೇಳಿಕೆ ನೀಡಿದ್ದು, 'ಸದ್ಯದ ಮಟ್ಟಿಗೆ ಚಾಟ್‌ಜಿಪಿಟಿಯ ಬಳಕೆ ಉಚಿತ. ಬೇಸಿಕ್ ವರ್ಷನ್ ಅನ್ನು ಯಾರು ಬೇಕಾದರೂ ಬಳಸಿಕೊಳ್ಳಬಹುದು. ಆದರೆ ಚಾಟ್‌ಜಿಪಿಟಿಯ ಅಡ್ವಾನ್ಸ್ಡ್ ವರ್ಷನ್ ಬಳಸಲು ಹಣ ಪಾವತಿ ಮಾಡಬೇಕಾಗುತ್ತದೆ' ಎಂದಿದೆ. ಗೂಗಲ್ ಐಡಿ ಮತ್ತು ಪಾಸ್‌ವರ್ಡ್ ಬಳಸಿ ಇದಕ್ಕೆ ಲಾಗಿನ್ ಆಗಬಹುದು. ■